MAY 2023 **U/ID 30703/ULC1A**

Time : Three hours Maximum : 75 marks

SECTION A — (10 × 2 = 20 marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. ಮುದಿ ಬ್ರಾಹ್ಮಣನ ವೇಷದಲ್ಲಿ ಬಂದ ಇಂದ್ರನು ಅರ್ಜುನನನ್ನು ಏನೆಂದು ಪ್ರಶ್ನಿಸಿದನು?

2. ಅರ್ಜುನನ ತಪಸ್ಸಿನ ಪ್ರಭಾವವನ್ನು ಮುನಿಗಳು ಶಿವನಿಗೆ ಹೇಗೆ ತಿಳಿಸಿದರು?

3. ದುರ್ಯೋಧನನು ವೈಶಂಪಾಯನ ಸರೋವರಕ್ಕೆ ಬಂದಾಗ ಅಲ್ಲಿದ್ದ ಪಕ್ಷಿಗಳು ಏನೆಂದು ಕಿರುಚಿದವು?

4. ಭೀಮನು ಏನೆಂದು ಹೇಳಿ ದುರ್ಯೋಧನನ್ನು ಹೊಡೆದನು?

5. ಭಕ್ತರು ಹೇಗೆ ನಡೆದುಕೊಳ್ಳಬೇಕೆಂದು ದಾಸಿಮಯ್ಯನು ಹೇಳುತ್ತಾನೆ?

6. ಹರಿಶ್ಚಂದ್ರ ಹಾಗೂ ಚಂದ್ರಮತಿಯರ ನಡುವೆ ನಡೆದ ಸಂಭಾಷಣೆ.

7. ಚಿತ್ರಸೇನನು ಊರ್ವಶಿಗೆ ಏನು ಹೇಳಿದನು?

8. ಮಾಯೆಯು ತನ್ನರಮನೆಯ ಗಿಳಿ, ಕೋಗಿಲೆ, ಹಂಸಗಳಿಗೆ ಏನು ಕಲಿಸಿದಳು?

9. ರಾಮನ ಒಡ್ಡೋಲಗ ಹೇಗಿತ್ತು? ವಿವರಿಸಿ.

10. ಚಂದ್ರಹಾಸನು ಹೇಗೆ ಅನಾಥನಾದನು?

11. ತವರು ಮನೆಯ ಬಗ್ಗೆ ಹೆಣ್ಣಿನ ಅಭಿಪ್ರಾಯ ಜನಪದ ಗೀತೆಯಲ್ಲಿ ಹೇಗೆ ವ್ಯಕ್ತವಾಗಿದೆ?

12. ತ್ರಿಪದಿಗಳು.

SECTION B — (5 × 5 = 25 marks)

ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. 'ತ್ರಿಪುರಾರಿ ಕೇಳ್ ತ್ರಿಪುರಮಿಸುವ ನಿನ್ನನೇ ಪೋಲ್ವಂ'.

14. 'ಲಜ್ಜಾಭರದಿಂದಂ ತಲೆಯನೆರಗಿದಂ ಧರ್ಮಸುತಂ'.

15. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ'.

16. 'ಎಂದಿನಂತುದಯ ಕಾಲದೊಳೆದ್ದು ಹುಲುಹುಳ್ಳಿಗೆಂದರಣ್ಯಕ್ಕೆ ನಡೆದು'.

17. 'ಏನು ಬಿಜಯಂಗೈದಿರಿತ್ತಲು ಮಾನನಿಧಿ ಕುಳ್ಳಿರಿ ಸುರೇಂದ್ರನ ಮಾನಿನಿಯರಭಿವಂದನೀಯರು'.

18. 'ಪರಿಮಳದ ಚಂದನದ ತರುವಿಗೆ ಸರಿಯೇ ಒಣಗಿದ ಕಾಷ್ಠ'.

19. 'ಪರಮ ಧಾನ್ಯದೊಳಿಬ್ಬರೇ ಇವರಿರಲಿ ಸೆರೆಯೊಳಗಾರು ತಿಂಗಳು'.

SECTION C — (3 × 10 = 30 marks)

ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. ಉತ್ತರದ ಮಿತಿ 500 ಪದಗಳು.

20. ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಗಳಿಸಿದ ಸನ್ನಿವೇಶವನ್ನು ವರ್ಣಿಸಿ.

21. ಮನುಷ್ಯರು ಹೇಗೆ ನಡೆದುಕೊಳ್ಳಬೇಕೆಂದು ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ?

22. ರಾಗಿ–ವ್ರೀಹಿ ಸಂವಾದದಲ್ಲಿ ಅಭಿವ್ಯಕ್ತವಾಗುವ ಸಾಮಾಜಿಕ ಧ್ವನಿ ಎಂಥಹುದು?

23. 'ಸತ್ಯಕ್ಕಿಂತ ದೊಡ್ಡದು ಮತ್ತೊಂದಿಲ್ಲ' ಎಂಬುದನ್ನು ಗೋವಿನ ಹಾಡು ಹೇಗೆ ಪ್ರತಿಪಾದಿಸುತ್ತದೆ?

24. ಭೀಮ–ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ರನ್ನನು ಹೇಗೆ ಸ್ವಾರಸ್ಯಕರವಾಗಿ ವರ್ಣಿಸಿದ್ದಾನೆ?
